CAREERINDIA

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

## ಹತ್ತನೆಯ ತರಗತಿಯ **ಖಾಸಗಿ ಅಭ್ಯರ್ಥಿಗಳ ( PF )** ಮಾದರಿ ಪ್ರಶ್ನೆ ಪತ್ರಿಕೆ – 1

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 125** **ಅವಧಿ: 3–00 ಗಂಟೆಗಳು**

**ಸೂಚನೆಗಳು** : ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.

- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 92 ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 20 ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 13 ಅಂಕಗಳು
- ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ

## ಭಾಗ – 'ಎ'

ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 92 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **16 * 1 = 16**

1. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳು ಯಾವುವು?

2. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?

3 ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

4. ಬ್ರಿಟೀಷ್ ಸರಕಾರ ವಿಶ್ವೇಶ್ವರಯ್ಯನವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?

5. ಹುಲಿಗೆ ಪರಮಾನಂದವಾಗಲು ಕಾರಣವೇನು?

6. ಘಟ ಸಂಭೂತ ಎಂದರೆ ಯಾರು?

7. ಮುನಿಸುತರು ಹೆದರಲು ಕಾರಣವೇನು?

8. ಯಜ್ಞಾಶ್ವವನ್ನು ಕಟ್ಟಿದವರು ಯಾರು?

9. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ.?

10. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?

11. ಕ್ರಿಯಾ ಸ್ವಾತಂತ್ರ್ಯ ಎಂದರೇನು?

12. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

13. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?

14. ಯಾವ ಎಚ್ಚರದೊಳು ಬದುಕಬೇಕಿದೆ?

www.careerindia.com

15. ಮಣ್ಣಿನ ಮಾಲೀಕ ಯಾರು?

16. ಬಿಳಿಯ ಕೊಳ ಎಲ್ಲಿದೆ?

**ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **16 * 2 = 32**

17. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?

18. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

19. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಗಳನ್ನು ಹೇಗೆ ಕೊಂಡಾಡಲಾಗಿದೆ?

20. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯರವರು ಸಲ್ಲಿಸಿದ ಸೇವೆ ಯಾವುದು?

21. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

22. ಸಂಕಲ್ಪಗೀತೆಯಲ್ಲಿ ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕು ಎಂದಿದ್ದಾರೆ?

23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆದಿತ್ತು?

24. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಎಚ್. ನರಸಿಂಹಯ್ಯ ಹೇಳಿದ್ದಾರೆ ?

25. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ??

26. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ?

27. ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

28. . ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

39. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?

30. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?

31. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

32. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

33. 'ಕೈಯಿಂದ ಇದನ್ನು ಮಾಡುವುದು ಹೇಗೋ'

34. "ಸ್ವಧರ್ಮೇ ನಿಧನಂ ಶ್ರೇಯಃ"

35. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

36. "ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ"

37. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."

38. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

www.careerindia.com

CAREERINDIA

ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ. 2 * 3 = 6

49. ದೇವನೂರ ಮಹದೇವ

40. ಪಂಪ

ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 * 4 = 4

41 . ಕೊರಳ ಸೆರೆ________________

________________________

____________________________________

_________________________

_________________________

________________________ ಮಾತೇನೆಂದು ಚಿಂತಿಸಿದ ॥

ಅಥವಾ

ಮಾರಿಗೌತಣ __________________

____________________________

____________________________________________

____________________________

____________________________

_______________________________ ರಾಜೀವಸಖನಾಣೆ ॥

ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4 * 1 = 4

42. ಮರನೇರಿದ ಮರ್ಕಟನಂತೆ

ಹಲವು ಕೊಂಬೆಗೆ ಹಾಯುತಲಿದೆ

ಬೆಂದಮನವ ನಾನೆಂತು ನಂಬುವೆನಯ್ಯಾ?

ಎಂತು ನಚ್ಚುವೆನಯ್ಯಾ?

ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ ॥

1. ಮನವನ್ನು ಯಾವುದಕ್ಕೆ ಹೋಲಿಸಲಾಗಿದೆ ?
2. ಮರ್ಕಟನ ಸಹಜ ಗುಣವೇನು?
3. ಬಸವಣ್ಣನವರು ಬೆಂದ ಮನಸ್ಸನ್ನು ನಂಬುವುದಿಲ್ಲ ಎನ್ನುವುದನ್ನು ಒಪ್ಪುವಿರಾ ? ಏಕೆ?
4. ಈ ವಚನದಲ್ಲಿ ನೀವು ಮೆಚ್ಚುವ ಅಂಶವೇನು?

www.careerindia.com

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.
**2 * 4 = 8**

43. ಜೀವನದೃಷ್ಟಿ ಗದ್ಯದಲ್ಲಿ ಅ0ತರ್ಜೀವಿಯ ವ್ಯಕ್ತಿತ್ವ ಹೇಗೆ ವರ್ಣಿತವಾಗಿದೆ?

ಅಥವಾ

ಸಮಾಜದಲ್ಲಿ ಕಲೋಪಾಸಕನ ಮಹತ್ತ್ವವನ್ನು ವಿ.ಕೃ.ಗೋಕಾಕ್ ಹೇಗೆ ವಿಶ್ಲೇಷಿಸಿದ್ದಾರೆ?

44. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

ಅಥವಾ

ದ.ರಾ.ಬೇಂದ್ರೆಯವರು ಕಾಲಪಕ್ಷಿಯ ರೂಪವನ್ನು ಹೇಗೆ ವರ್ಣಿಸಿದ್ದಾರೆ? ಮತ್ತು ಹಕ್ಕಿಯ ಹಾರೈಕೆಯೇನು?

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4 = (2+2)**

**45.** ವ॥ ಮನುಷ್ಯರ ಸುಕೃತ ದುಷ್ಕೃತಂಗಳು ದೈವಗಳರಿಗುಮದರಿಂದೀ ಸಾಕ್ಷಿಯುಮುಚಿತಂ. ಮರನಂ ನುಡಿಸುವುದು ಪರಮಗಹನಮೀ ಸಾಕ್ಷಿಯಂ ಕೈಕೊಳ್ವುದೆನೆ ಧರ್ಮಬುದ್ಧಿ ಕರಮೊಳ್ಳಿತ್ತು ಕೈಕೊಂಡೆನೆನೆ ಧರ್ಮಾಧಿಕರಣದವರಂದು ಪೋಳ್ತು ಪೋದುದು, ನಾಳೆ ಪೋಗಿ ಕೇಳ್ವಮೆನೆ ತಮ್ಮ ತಮ್ಮ ಮನೆಗೆಲ್ಲರುಂ ಪೋದರ್, ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕೈಯಂಪಿಡಿದು ಕಟ್ಟೇಕಾಂತಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇಳ್ದು ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವು ಕಾಲಂ ಪಸಿಯದುಂಡು ಬಾಳ್ವಂತರ್ಥಂ ಸಾರ್ದಪುದು ನೀವಾ ಮರದ ಪೊಳಲೊಳಡಂಗಿರ್ದು ಧರ್ಮಬುದ್ಧಿಯೇ ಪೊನ್ನಂ ಕೊಂಡುಯ್ದನೆಂದು ನುಡಿಯಿಮೆಂಬುದುಮಾತನಿಂತೆಂದಂ

ಪರಧನಹರಣಮುಂ ವಿಶ್ವಾಸಘಾತುಕಮುಂ ಸ್ವಾಮಿದ್ರೋಹಮುಂ ಇವೆಲ್ಲಮೇಗೆಯ್ದುಂ ಕಿಡಿಸುಗುಮಿಂತಪ್ಪುದೆಲ್ಲಮಂ ನೀನರಿದಿರ್ದೆನ್ನುಮಂ ಸಾಕ್ಷಿ ಮಾಡಿ ನುಡಿಸಿ ಕಿಡಿಸಲ್ಬಗೆದೆ, ನಿನ್ನ ಪೊಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ ಎನಲ್ ದುಷ್ಟಬುದ್ಧಿ ಕೇಳ್ದು ನಮ್ಮ ನಿರ್ವಾಹಮಂ ಕಿಡಿಸದೆನ್ನಂದುದಂ ಗೆಯ್ಯೆಂದು ತನ್ನ ತಂದೆಯನೊಡಂಬಡಿಸುತ್ತಿರ್ಪಿನಮಾದಿತ್ಯನಪರಗಿರಿಯನೆಯ್ದುವುದುಂ

ಪ್ರಶ್ನೆಗಳು :

1. ದುಷ್ಟಬುದ್ಧಿಯು ಏಕಾಂತದಲ್ಲಿ ತನ್ನ ತಂದೆಗೆ ಏನೆಂದು ಹೇಳಿದನು?

2. ದುಷ್ಟಬುದ್ಧಿಯು ತನ್ನ ತಂತ್ರವನ್ನು ಹಾಳುಮಾಡಬೇಡವೆಂದು ತಂದೆಯ ಮೇಲೆ ಕೋಪಿಸಿಕೊಳ್ಳಲು ಕಾರಣವೇನು?

## ಭಾಗ – 'ಬಿ'

(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು – 20 ಅಂಕಗಳು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. 10 * 1 = 10**

46. 'ಜಗಜ್ಜ್ಯೋತಿ' ಪದದಲ್ಲಿ ಏರ್ಪಟ್ಟಿರುವ ಸಂಧಿ :

(ಎ) ಗುಣಸಂಧಿ (ಬಿ) ವೃದ್ಧಿಸಂಧಿ (ಸಿ) ಜಶ್ತ್ವಸಂಧಿ (ಡಿ) ಶ್ಚುತ್ವ

47. ಕನ್ನಡ ವರ್ಣಮಾಲೆಯಲ್ಲಿಯ ಮಹಾಪ್ರಾಣಾಕ್ಷರಗಳ ಸಂಖ್ಯೆ :

(ಎ) 34 (ಬಿ) 10 (ಸಿ) 25 (ಡಿ) 52

www.careerindia.com

CAREERINDIA

48. ಕೃದಂತಭಾವನಾಮಕ್ಕೆ ಉದಾಹರಣೆಯಿದು :

(ಎ) ಓಟ (ಬಿ) ಮಾಡಿದ (ಸಿ) ನಡೆಯುತ್ತ (ಡಿ) ಬಾಳದ

49. ಕರ್ಮಧಾರಯ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

50. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ಇದು :

(ಎ) ಉದ್ಧರಣ (ಬಿ) ವಾಕ್ಯವೇಷ್ಟನ (ಸಿ) ಆವರಣ (ಡಿ) ವಿವರಣ

51. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು :

(ಎ) ಸಾಮಾನ್ಯವಾಕ್ಯ (ಬಿ) ಪ್ರಶ್ನಾರ್ಥಕವಾಕ್ಯ (ಸಿ) ಸಂಯೋಜಿತವಾಕ್ಯ (ಡಿ) ಮಿಶ್ರವಾಕ್ಯ

52. 'ಕಾಲೇಜು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :

(ಎ) ಹಿಂದೂಸ್ಥಾನಿ (ಬಿ) ಉರ್ದು (ಸಿ) ಇಂಗ್ಲಿಷ್ (ಡಿ) ಫಾರ್ಸಿ

53. ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲಿನಲ್ಲಿ ಮತ್ತೆ ಮತ್ತೆ ಬಂದರೆ ಅದನ್ನು ಶಬ್ದಾಲಂಕಾರದಲ್ಲಿ ಹೀಗೆನ್ನುವರು :

(ಎ) ಛೇಕಾನುಪ್ರಾಸ (ಬಿ) ಯಮಕ (ಸಿ) ಚಿತ್ರಕವಿತ್ವ (ಡಿ) ವೃತ್ತ್ಯನುಪ್ರಾಸ

54. ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಿದು :

(ಎ)ಅಹುದು (ಬಿ) ಅಯ್ಯೋ (ಸಿ) ಅದುವೇ (ಡಿ) ಅಥವಾ

55. ಅನ್ವರ್ಥಕ ನಾಮಪದಕ್ಕೆ ಉದಾಹರಣೆಯಿದು :

(ಎ) ರಾಮನಾಥ (ಬಿ) ಪಡುವಣ (ಸಿ) ಪೂಜಾರಿ (ಡಿ) ದೇಶ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ.** **4 * 1 = 4**

56. ಒಮ್ಮೊಮ್ಮೆ : ದ್ವಿರುಕ್ತಿ : : ಮನೆಮಠ :

57. ಬೀಯ : ವ್ಯಯ : : ಬೇಹಾರಿ :

58. ಇಂಬು : ಅವಕಾಶ : : ಚೋದ್ಯ :

59. ಖ್ಯಾತಕರ್ನಾಟಕ : ಅಕ್ಷರ ಗಣ : : ರಗಳೆ :

60. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1*3=3**

ನೀನುಳ್ಳೊಡೆಲ್ಲರೊಳರೆಮ

ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೆ ।

ಅಥವಾ

www.careerindia.com

CAREERINDIA

ಅತಿಕುಟಿಲಮನಂ ಧನಲು

ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ ।

**61.** ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿ. **1 * 3 =3**

"ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದಾಂಗ"

ಅಥವಾ

"ನುಡಿದರೆ ಮುತ್ತಿನ ಹಾರದಂತಿರಬೇಕು"

## ಭಾಗ – 'ಸಿ'

(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 13 ಅಂಕಗಳು)

**62.** ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **1 * 3 = 3**

- ಶಕ್ತಿಗಿಂತ ಯುಕ್ತಿ ಮೇಲು
- ಕಟ್ಟುವುದು ಕಠಿಣ ಕೆಡವುವುದು ಸುಲಭ
- ಮಾತೇ ಮುತ್ತು ಮಾತೇ ಮೃತ್ಯು

**63.** ನಿಮ್ಮ ಶಾಲೆಯಲ್ಲಿ ಆಚರಿಸಿರುವ 'ಕನ್ನಡ ರಾಜ್ಯೋತ್ಸವ ದಿನಾಚರಣೆ'ಯ ಕಾರ್ಯಕ್ರಮದ ಪತ್ರಿಕಾ ವರದಿಯನ್ನು ಪ್ರಕಟಿಸಲು ಕೋರಿ, ಜಿಲ್ಲಾ ಕೇಂದ್ರದಲ್ಲಿರುವ 'ಕನ್ನಡ ಪ್ರಭ' ದಿನ ಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. **1 * 5 = 5**

ಅಥವಾ

ನಿಮ್ಮನ್ನು ಹಳಿಯಾಳದ ಆಶ್ರಮ ಶಾಲೆಯ ವಿದ್ಯಾರ್ಥಿ 'ಯಶಸ್' ಎಂದು ಭಾವಿಸಿಕೊಂಡು, ಚಿಕ್ಕಮಗಳೂರಿನ ನಿವಾಸಿಯಾದ ತಾಯಿಯವರಿಗೆ ಪರೀಕ್ಷಾ ತಯಾರಿಯನ್ನು ವಿವರಿಸಿ ಪತ್ರ ಬರೆಯಿರಿ.

**64.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1 * 5 = 5**

- ಬಾಲ ಸ್ವಚ್ಛತಾ ಆಂದೋಲನ
- ಮಹಿಳಾ ದೌರ್ಜನ್ಯ ತಡೆಗಟ್ಟುವಲ್ಲಿ ಜನಪ್ರತಿನಿಧಿಗಳ ಪಾತ್ರ
- ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದ ಸವಲತ್ತುಗಳು

---- 0 ----

www.careerindia.com